ಅ) ಹಾಗಿದ್ದಲ್ಲಿ ಈ ಸಾರ್ವಜನಿಕ ಮಹತ್ವದ ಸ್ಥಳ ಉಳಿಸಿಕೊಳ್ಳಲು ಸರ್ಕಾರಿ ಅಧಿಕಾರಿಗಳು ಅಸಕ್ತರಾಗಿಲ್ಲದಿರಲು ಕಾರಣವೇನು;

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಮತ್ತು ಇ) ಇಂತಹ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟಿರುವ ಜಮೀನಿನಲ್ಲಿ ಒತ್ತುವರಿ ಆಗಿದ್ದರೆ, ಅದನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಇಂತಹ ಜಮೀನಿನಲ್ಲಿ ಒತ್ತುವರಿಯನ್ನು ಒಕ್ಕಲೆಬ್ಬಿಸಲು ಕಾನೂನಿನಲ್ಲಿಯೇ ಅವಕಾಶವಿರುತ್ತದೆ. ಆದರೂ ಸರ್ಕಾರಿ ಸುತ್ತೋಲೆ ಸಂಖ್ಯೆ : ಆರ್ಡಿ 91 ಎಲ್ಆಿಪಿ 92, ದಿನಾಂಕ 22-5-93 ರಲ್ಲಿ ಕೂಡ ಸ್ಪಷ್ಟವಾಗಿ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ಶೇಂದಿವನದ ಜಮೀನಿನ ವಿಸ್ತೀರ್ಣ

316 - ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಿತರಣೆ ಆಗದೆ ಉಳಿದಿರುವ ಶೇಂದಿವನ ಜಮೀನಿನ ವಿಸ್ತೀರ್ಣವೆಷ್ಟು?

ಆ) ಇದರಲ್ಲಿರಬಹುದಾದ ಮರಗಳ ಸಂಖ್ಯೆ ಎಷ್ಟು?

ಇ) ಈಗಾಗಲೇ ಈ ಜಮೀನಿನಲ್ಲಿ ಸಾಗುವಳಿ ಮಾಡಿರಬಹುದಾದ ವಿಸ್ತೀರ್ಣವೆಷ್ಟು?

ಈ) ಸದರಿ ಜಮೀನನ್ನು ಬಗರ್ಹುಕುಂ ವ್ಯಾಪ್ತಿಯಲ್ಲಿ ತಂದು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಉ) ಮಾಡುವುದಾದಲ್ಲಿ ಯಾವಾಗ ಕ್ರಮ ಕೈಗೊಳ್ಳುವಿರಿ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 12,289-00 ಎಕರೆಗಳು

ಆ) ಮರಗಳು ಯಾವುದು ಇಲ್ಲಾ.

ಇ) 12,289-00 ಎಕರೆಗಳು.

ಈ) ಶೇಂದಿ-ವನದ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಸಕ್ರಮಣ ಮಾಡುವುದರ ಬಗ್ಗೆ ಸರ್ಕಾರ ಒಂದು ಪಾಲಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿದ್ದು, ಪ್ರಸ್ತಾವನೆ ಸಚಿವ ಸಂಪುಟದ ಪರಿಶೀಲನೆಯಲ್ಲಿದೆ.

ಉ) ತೀರ್ಮಾನ ತೆಗೆದುಕೊಂಡ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದ ವ್ಯವಹಾರದಲ್ಲಿ ಕೆಲವು ಸಂಶಯಗಳು

270 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಣ್ಣದ ಟಿ.ವಿ. ಮತ್ತು ಫ್ರಿಡ್ಜ್‌ಗಳನ್ನು ಪಾಯಂ ಉದ್ಯೋಗಿಗಳಿಗೆ ವಿತರಿಸಲು ದಿನಾಂಕ 20-5-1993 ರಿಂದ 18-1-1994ರವರೆಗೆ ಕೆ.ಎಸ್.ಐ.ಎಂ.ಸಿ.ಯವರು ಸದರಿ ವಸ್ತುಗಳ ಅಧಿಕೃತ ಮಾರಾಟಗಾರರಿಗೆ ಎಷ್ಟು ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ಈ ರೀತಿ ಹಣ ಬಿಡುಗಡೆ ಮಾಡಲು ಸರ್ಕಾರ ಅನುಮತಿ ಕೊಟ್ಟಿದೆಯೇ; ಮುಂಗಡ ಹಣ ಪಡೆದ ಅಧಿಕೃತ ಮಾರಾಟಗಾರರು ಯಾರು;